ಮೈಸೂರ ಗೆಜಿಟ.

ಸರ್ಕಾರದಿಂದ ಪ್ರಾಯಿಷ್ಠಿದ್ದು.

ಬೆಂಗಳೂರು, ಶನಿವಾರ ಆಗಸ್ಟ್, ತಾ|| 23, ಸ್ಟ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಮೈಸೂರು ಗವರ್ನಮೆಂಟ್ ಲೆಜಸ್ಲೇಟಿವ್ ಇಲಾಖೆ.

ಶ್ರೀಮನ್ಮಹಾರಾಜಾ ಸರ್ಕಾರದವರು ಇದರಡಿ ಕಂಡ ಮಸವಿದಾ ರೆಗ್ಯುಲೇಷನನ್ನು ತಮ್ಮ ರಾಜ್ಯದ ಆಡಳಿತದಲ್ಲಿ ಜಾರಿಯೊಳು ತರಬೇಕೆಂದುದ್ದೇಶಿಸಿರುತ್ತಾರೆ.

1890ನೇ ಇಸವಿಯ Iನೇ ನಂಬರ್.

ಮೈಸೂರು ಸೀಮೆಯೊಳಗಣ ಕೆಲವು ಪ್ರದೇಶಗಳಲ್ಲಿ ಮನುಷ್ಯ ಸಂಬಂಧವಾದ ಸ್ಫೋಟಿಕದ ಹಾಲಿನಿಂದ ಶಿಡುಬು ಹಾಕುವದಂ ನಿರೋಧಿಸುವ ಬಗ್ಗೆ ಅಧಿಕಾರ ವುಂಟು ಮಾಡುವದಕ್ಕೂ, ಮಕ್ಕಳಿಗೆ ಗೋ ಸಂಬಂಧವಾದ ಹಾಲಿನಿಂದ ಶಿಡಬು ಹಾಕುವದನ್ನು ಬಲಾತ್ಕರಿಸುವದಕ್ಕೂ ಹುಟ್ಟಿದ ಮಸವಿದಾ ರೆಗ್ಯುಲೇಷ್ಟ್.

ಪೀಠಿಕೆ.

ಮೈಸೂರು ಸೀಮೆಯೊಳಗಣ ಕೆಲವು ಪ್ರದೇಶಗಳಲ್ಲಿ ಮನುಷ್ಯ ಸಂಬಂಧವಾದ ಸ್ಫೋಟಿಕದ ಹಾಲಿನಿಂದ ಶಿಡುಬು ಹಾಕುವದನ್ನು ನಿರೋಧಿಸುವ ಬಗ್ಗೆ ಅಧಿಕಾರ ವುಂಟು ಮಾಡ ಬೇಕಾದದ್ದು, ಮಕ್ಕಳಿಗೆ ಗೋ ಸಂಬಂಧವಾದ ಹಾಲಿನಿಂದ ಶಿಡುಬು ಹಾಕುವದನ್ನು ಬಲಾತ್ಕರಿಸಬೇಕಾದದ್ದೂ ಯುಕ್ತವಾಗಿರುವದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾ ಸಾಹೆಬ್ ಬಹದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

ಚಿಕ್ಕ ಹೆಸರು. ವ್ಯಾಪ್ತಿ.

1. ಈ ರೆಗ್ಯುಲೇಷ್ಟ್ "1890 ನೇ ಇಸವಿಯ ವ್ಯಾಕ್ಸಿನೇಷ್ಟ್ ರೆಗ್ಯುಲೇಷ್ಟ್ (Vaccination Regulation) ಯಾನೆ ಸ್ಫೋಟಿಕ ನಿಬಂಧನೆ" ಎಂದು ಕರೆಯಲ್ಪಡ ಬಹುದು, ಮತ್ತು ಸದರೀ ರೆಗ್ಯುಲೇಷ್ಟ್ ಮುಂದೆ ವಿಧಿಸಲ್ಪಡತಕ್ಕ ರೀತಿಯಲ್ಲಿ ಜಾರಿಯೊಳು ತಂದು ಕೊಳ್ಳಬಹುದಾದಂತಾ ಮ್ಯೂನಿಸಿಪಾಲಿಟಿಗಳಿಗೂ ಇತರ ಸ್ಥಾನೀಯ ಪ್ರಾಂತಗಳಿಗೂ ಮಾತ್ರವೇ ಲಗಾವಾಗತಕ್ಕದ್ದು.

ಅರ್ಥ ವಿವರಣೆಯ ಕಲಂ.

2. ಈ ರೆಗ್ಯುಲೇಷನಿನಲ್ಲಿ ಸಂದರ್ಭಕ್ಕಾಗಲಿ, ಪ್ರಮೇಯಕ್ಕಾಗಲಿ, ಯೇನಾದರು ವಿರೋಧ ವಿದ್ದಹೊರತು,—

(1.) "ಮ್ಯೂನಿಸಿಪೆಲ್ ಕಮ್ಮಿಷನರ್‌ಗಳು" ಅಂದರೆ ತತ್ಕಾಲದೊಳು ಜಾರೀಯೆಲ್ಲಿರುವ ಯಾವದಾದರು ಕಾನೂನಿನ ನಿಯಮಗಳು ಯಾ ಗವರ್ನ್‌ಮೆಂಟಿನವರ ವಿಧಾಯತ ಹುಕುಂ ಅನುಸರಿಸಿ ನಿರ್ಪಡಿಸಲ್ಪಟ್ಟ ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ಸಮೂಹವು ಅಥವಾ ಮ್ಯೂನಿಸಿಪೆಲ್ ಸಂಘವೆಂದರ್ಥವು.

"ಮ್ಯೂನಿಸಿಪೆಲ್ ಕಮ್ಮಿಷನರ್‌ಗಳು."

(2.) "ಹೆತ್ತವರು" ಅಂದರೆ ವಿವಾಹ ಸಂಬಂಧದಿಂ ಜನಿಸಿದ ಮಗುವಿನ ತಂಬೆ ಯೆಂತಲೂ, ವಿವಾಹ ಸಂಬಂಧ ನಿಲ್ಲದೆ ಜನಿಸಿದ ಮಗವಿನ ತಾಯಿ ಯೆಂತಲೂ ಅರ್ಥವು:

"ಹೆತ್ತವರು."

(3.) "ಗಾರ್ಡಿಯ್ಯ" ಅಂದರೆ ಯಾವ ಮಗುವನ್ನಾದರು ಪರಾಮರ್ಶಿಸುವಣ, ಪೋಷಿಸುವಣ, ಅಥವಾ ಸಂರಕ್ಷಿಸುವಣ, ಇದು ಕಾನೂನನ್ನೆನುಸರಿಸಿ ಯಾಗಲಿ, ಸಹಜವಾದ ಬಾಧ್ಯತೆ ಯಿಂದಲಾಗಲಿ, ಅಂಗೀಕರಿಸಲ್ಪಟ್ಟ ಪದ್ಧತಿಯ ಪ್ರಕಾರವಾಗಲಿ ಯಾರ ಕೆಲಸವಾಗಿರುತಿದೆಯೋ, ಅಥವಾ ಯಾವ ಮಗುವನ್ನಾದರು ಪರಾಮರ್ಶಿಸುವಂತೆ ಪೋಷಿಸುವಂತೆ ಅಥವಾ ಸಂರಕ್ಷಿಸುವಂತೆ ಯಾವನು ಒಪ್ಪಿಕೊಳ್ಳುತ್ತಾನೆಯೋ ಯಾ ವಹಿಸುತ್ತಾನೆಯೋ ಅಲ್ಲದೆ ಯಾವ ಮಗುವನ್ನಾದರು ಪರಾಮರ್ಶಿಸುವಂತೆ ಯಾಗಲಿ ಸಂರಕ್ಷಿಸುವಂತೆ ಯಾಗಲಿ ನ್ಯಾಯವಾದ ಯಾವ ಅಧಿಕಾರಿಯಿಂದ ಒಪ್ಪಿಸಲ್ಪಟ್ಟಿರುತ್ತಾನೆಯೋ ಅಂತಾ ಒಬ್ಬ ಮನುಷ್ಯನೆಂದರ್ಥವು:

"ಗಾರ್ಡಿಯ್ಯ."

(4.) "ಕಾಪಾಡಲ್ಪಡದ ಮಗುವು" ಅಂದರೆ ಶಿಡುಬು ರೋಗವು ಸ್ವಾಭಾವಿಕವಾಗಿ ಯಾಗಲಿ ಅಥವಾ ಮನುಷ್ಯ ಸಂಬಂಧವಾದ ಹಾಲಿನಿಂದ ಶಿಡುಬು ಹಾಕಿಸುವದರಿಂದಲಾಗಲಿ, ಅಥವಾ ಸಫಲನಾಗುವಂತೆ ಶಿಡುಬು ಹಾಕುವದರಿಂದಲಾಗಲಿ ಸದರೀ ರೋಗದಿಂದ ಸಂರಕ್ಷಿಸಲ್ಪಡದಿರತಕ್ಕ ಮತ್ತು ಶಿಡುಬು ಹಾಕುವದರಿಂದ ಪ್ರಯೋಜನ ವಿಲ್ಲವೆಂದು ಈ ರೆಗ್ಯುಲೇಷ್ಣ ಅನುಸರಿಸಿ ಸರ್ಟಿಫೈ ಮಾಡಲ್ಪಡದ ಒಂದು ಮಗುವೆಂದು ಅರ್ಥವು.

"ಕಾಪಾಡಲ್ಪಡದ ಮಗುವು."

(5.) "ಮನುಷ್ಯ ಸಂಬೀಧವಾದ ಹಾಲಿನಿಂದ ಶಿಡುಬು ಹಾಕುವಣ" ಅಂದರೆ ಒಂದುವಿಧ ಸ್ಪೆಶಿಟಿಕ ಸಂಬಂಧವಾದ ಹಾಲಿನಿಂದ ಯಾವನಾಪರೊಬ್ಬ ಮನುಷ್ಯನಿಗೆ ಶಿಡುಬು ರೋಗವನ್ನುಂಟು ಮಾಡಬೇಕೆಂಬ ಉದ್ದೇಶದೊಡನೆ ಮಾಡಲ್ಪಡುವ ಚಿಕಿತ್ಸಾ ಕ್ರಮ ವೆಂದರ್ಥವು.

"ಮನುಷ್ಯ ಸಂಬಂಧವಾದ ಹಾಲಿನಿಂದ ಶಿಡುಬು ಹಾಕುವಣ."

(6.) "ವ್ಯಾಕ್ಸಿನೇಷ್ಣ ಸರ್ಕಿಲ್" ಅಂದರೆ ಶಿಡುಬು ಹಾಕುವಚಕ್ಕಾಗಿ ಈ ರೆಗ್ಯುಲೇಷ್ಣ ಅನುಸರಿಸಿ ವಿಭಜಿಸಲ್ಪಟ್ಟ ಸ್ಥಾನೀಯ ಪ್ರಾಂತದ ಭಾಗಗಳ ಪೈಕಿ ಬಂದೆಂದರ್ಥವು.

"ವ್ಯಾಕ್ಸಿನೇಷ್ಣ ಸರ್ಕಿಲ್."

(7.) "ವ್ಯಾಕ್ಸಿನೇಟರ್ ಯಾನೆ ಶಿಡುಬು ಹಾಕತಕ್ಕವರು" ಅಂದರೆ ಶಿಡುಬು ಹಾಕುವ ಕ್ರಮವನ್ನು ನಡೆಸುವ ಬಗ್ಗೆ ಈ ರೆಗ್ಯುಲೇಷ್ಣ ಅನುಸರಿಸಿ ನೊಕರಮ್ಮಾಡಲ್ಪಟ್ಟ ಯಾವ ವ್ಯಾಕ್ಸಿನೇಟರೆಂತಲಾಗಲಿ ಅಥವಾ ಅದೇ ಕೆಲಸವನ್ನು ಮಾಡುವ ಬಗ್ಗೆ ಮುಂದೆ ವಿಧಿಸಲ್ಪಡತಕ್ಕ ರೀತಿಯಲ್ಲಿ ಗವರ್ನ್‌ಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಯಾವನಾದರೊಬ್ಬ ಖುಷ್ ಬಾಷ್ ಮನುಷ್ಯನೆಂತಲಾಗಲಿ ಅರ್ಥವಲ್ಲದೆ ವ್ಯಾಕ್ಸಿನೇಷ್ಣ ಸ್ಯೂಪರ್‌ಟೆಂಡೆಂಟ್ ಎಂದು ಸಹ ಅರ್ಥವು.

"ವ್ಯಾಕ್ಸಿನೇಟರ್."

(8.) "ವ್ಯಾಕ್ಸಿನೇಷ್ಣ ಸೀಜ್" ಯಾನೆ ಶಿಡುಬು ಹಾಕತಕ್ಕ ಅಯೋಂ ಅಂದರೆ ಯಾವದಾದರು ಸ್ಥಾನೀಯ ಪ್ರಾಂತಕ್ಕಾಗಿ ಗವರ್ನ್‌ಮೆಂಟಿನವರು ಆಗಿಂದಾಗ್ಗೆ ಸರ್ಕಾರೀ ಗೆಜೆಟ್‌ನಲ್ಲಿ ಇಸ್ತಿಹಾರ್ ಮೂಲಕ ಗೊತ್ತು ಮಾಡಬಹುದಾದ ಕಾಲ ಪರಿಮಾಣ ವೆಂದರ್ಥವು, ಅಂತಾ ಅಯೋಂನಲ್ಲಿ ಮಾತ್ರವೆ ಈ ರೆಗ್ಯುಲೇಷ್ಣ ಅನುಸರಿಸಿ ಶಿಡುಬು ಹಾಕಲ್ಪಡ ಬಹುದು.

"ವ್ಯಾಕ್ಸಿನೇಷ್ಣ ಸೀಜ್."

3. ಇದಕ್ಕೊಸ್ಕರ ವಿಶೇಷತಃ ಸೇರಿದ ಒಂದು ಮ್ಯೂನಿಸಿಪೆಲ್ ಕಮ್ಮಿಷನರ್‌ಗಳ ಮೀಟಿಂಗಿನಲ್ಲಿ ಹಾಜರಿರತಕ್ಕ ಜಾಸ್ತೀ ಸಂಖ್ಯೆಯವರು ಒಂದು ಮ್ಯೂನಿಸಿಪಾಲಿಟಿಗೆ ಪೂರಾವಾಗಿ ಯಾಗಲಿ ಅಥವಾ ಅದರ ಪೈಕಿ ಒಂದು ಭಾಗಕ್ಕಾಗಲಿ ಈ ರೆಗ್ಯುಲೇಷನ್ನು ವಿಸ್ತರಿಸುವಂತೆ ಗವರ್ನ್‌ಮೆಂಟನವರನ್ನು ಕೇಳಿಕೊಳ್ಳ ಬಹುದು.

ಈ ರೆಗ್ಯುಲೇಷನನ್ನು ಮ್ಯೂನಿಸಿಪಾಲಿಟಿಗಳಿಗೆ ವಿಸ್ತರಿಸುವಣ.

ಅದರಮೇಲೆ ಗವರ್ನಮೆಂಟಿನವರು ತಮಗೆ ಯುಕ್ತವೆಂದು ತೋರಿದರೆ ಕೇಳಿಕೊಳ್ಳಲ್ಪಟ್ಟ ರೀತಿಯಲ್ಲಿ ಈ ರೆಗ್ಯುಲೇಷನನ್ನು ವಿಸ್ತರಿಸಲು ತಮ್ಮ ಅಭಿಪ್ರಾಯವನ್ನು ಸರ್ಕಾರೀ ಗೆಜೆಟ್ಟಿನಲ್ಲಿ ಫಾಯಿಷ್ ಮಾಡುವ ಇಸ್ತಿಹಾರ್ ಮೂಲಕ ಪ್ರಕಟಿಸ ಬಹುದು.

ಅಂತಾ ಮ್ಯೂನಿಸಿಪಾಲಿಟಿಯಲ್ಲಿ ಅಥವಾ ಅದರ ಪೈಕಿ ಯೊಂದು ಭಾಗದಲ್ಲಿ ವಾಸವಾಗಿರತಕ್ಕವ ನ್ಯಾವನಾದರು ಹಾಗೆ ವಿಸ್ತರಿಸುವದನ್ನು ಆಕ್ಷೇಪಿಸುವನಾದರೆ ಅಂತಾ ಇಸ್ತಿಹಾರ್ ನಾಮೆಯನ್ನು ಪ್ರಕಟಿಸಿದ ತಾರೀಖು ಲಾಗಾಯತು ಆರು ವಾರಗಳೊಳಗಾಗಿ ತನ್ನ ಆಕ್ಷೇಪಣೆಯನ್ನು ಲೇಖನ ಮೂಲಕವಾಗಿ ಗವರ್ನಮೆಂಟ್ ಚೀಫ್ ಸೆಕ್ರಿಟೆರಿ ಯವರಿಗೆ ಕಳುಹಿಸ ಬಹುದು. ಗವರ್ನಮೆಂಟಿನವರು ಅಂತಾ ಆಕ್ಷೇಪಣೆಯನ್ನು ತಮ್ಮ ಆಲೋಚನೆಯಲ್ಲಿ ತರತಕ್ಕದ್ದು. ಮೇಲೆಕಂಡ ಪ್ರಕಟನೆಯ ತಾರೀಖು ಲಾಗಾಯತು ಆರು ವಾರಗಳು ಗತಿಸಿದ ತರುವಾಯ ಮೇಲೆ ತಿಳಿಸಲ್ಪಟ್ಟ ಪ್ರಕಾರ ಅಂತಾ ಆಕ್ಷೇಪಣೆಗಳು ಕಳುಹಿಸಲ್ಪಡದಿರುವ ಪಕ್ಷಕ್ಕೆ ಅಥವಾ ಅಂತಾ ಆಕ್ಷೇಪಣೆಗಳು ಹಾಗೆ ಕಳುಹಿಸಲ್ಪಟ್ಟಿದ್ದ ಪಕ್ಷಕ್ಕೆ ಅವು ಗವರ್ನಮೆಂಟಿನವರ ತಾತ್ಪರ್ಯದಲ್ಲಿ ಸಾಲದಿದ್ದರೆ ಅವರು ಬದಸ್ತೂರ್ ಇಸ್ತಿಹಾರ್ ಮೂಲಕ ಮೊದಲು ಕೇಳಿಕೊಳ್ಳಲ್ಪಟ್ಟಂತೆ ರೆಗ್ಯುಲೇಷನನ್ನು ವಿಸ್ತರಿಸ ಬಹುದು.

ಈ ರೆಗ್ಯುಲೇಷನನ್ನು ಮ್ಯೂನಿಸಿಪಾಲಿಟಿಗಳಲದ ಇತರ ಪ್ರದೇಶಗಳಿಗೆ ವಿಸ್ತರಿಸುವಣ.

4. ಗವರ್ನಮೆಂಟಿನವರು ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ ಈ ರೆಗ್ಯುಲೇಷನನ್ನು ಮ್ಯೂನಿಸಿಪಾಲಿಟಿಯಲ್ಲದ ಇತರ ಸ್ಥಾನೀಯ ಪ್ರಾಂತಕ್ಕೆ ಪೂರ್ತಿಯಾಗಿ ಯಾಗಲಿ ಅಥವಾ ಅದರ ಯಾವ ಭಾಗಕ್ಕಾಗಲಿ ವಿಸ್ತರಿಸ ಬಹುದು.

ಸ್ಥಾನೀಯ ಪ್ರಾಂತದಲ್ಲಿ ಈ ರೆಗ್ಯುಲೇಷನಿನ ವ್ಯಾಪಕತೆಯಂ ನಿಲ್ಲಿಸುವದಕ್ಕೆ ಅಧಿಕಾರ.

5. ಗವರ್ನಮೆಂಟಿನವರು ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ ಯಾವ ಮ್ಯೂನಿಸಿಪಾಲಿಟಿಯಲ್ಲಿ ಪೂರ್ತಿಯಾಗಿ ಯಾಗಲಿ ಅಥವಾ ಯಾವ ಭಾಗದಲ್ಲಾಗಲಿ ಯಾ ಇತರ ಸ್ಥಾನೀಯ ಪ್ರಾಂತದಲ್ಲಾಗಲಿ ಈ ರೆಗ್ಯುಲೇಷನಿನ ವ್ಯಾಪಕತೆಯಂ ನಿಲ್ಲಿಸ ಬಹುದು.

ಮನುಷ್ಯ ಸಂಬಂಧವಾದ ಹಾಲನ್ನು ತೆಗದು ಕಿಡುಬು ಹಾಕುವದನ್ನು ನಿರೋಧಿಸುವಣ.

6. ಮೈಸೂರು ದೇಶದೊಳಗೆ, ಮನುಷ್ಯ ಸಂಬಂಧವಾದ ಹಾಲಿನಿಂದ ಕಿಡುಬು ಹಾಕಿಸುವಣವು ನಿಷೇಧಿಸಲ್ಪಟ್ಟಿರುತಿದೆ, ಮತ್ತು ಅಂತಾ ಕಿಡುಬು ಹಾಕಲ್ಪಟ್ಟ ಯಾವ ಮನುಷ್ಯನಾಗಲಿ, ಹಾಗೆ, ಕಿಡುಬು ಹಾಕಲ್ಪಟ್ಟ ತಾರೀಖು ಲಾಗಾಯತು ನಲವತ್ತು ದಿವಸಗಳು ಕಳೆಯುವದಕ್ಕೆ ಮುಂಚಿತವಾಗಿ ಗವರ್ನಮೆಂಟಿನವರು ಆಗಿಂದಾಗ್ಯೆ ಲಿಖಿತ ಮೂಲಕವಾದ ಹುಕುಮಿನಿಂದ ಸರ್ಟಿಫಿಕೇಟ್‌ಗಳನ್ನು ಕೊಡುವದಕ್ಕೆ ಅಧಿಕಾರ ಉಂಟು ಮಾಡುವಂತಾ ತರಗತಿಯುಳ್ಳವರಾದ ಮೆಡಿಕಲ್‌ಪ್ರ್ಯಾಕ್ಟಿಷನರ್ ಯಾನೆ ವೈದ್ಯ ವಿದ್ಯಾಭ್ಯಾಸಿಯಿಂದ, ಅಂತಾ ಮನುಷ್ಯನ ಸ್ಪರ್ಶ ಅಥವಾ ಸಾಮೀಪ್ಯದ ದೆಸೆಯಿಂದ ಇನ್ನುಮೇಲೆ ಕಿಡುಬು ರೋಗವು ಪ್ರಾಯೇಣ ಉಂಟಾಗಲಾರದೆಂಬದಾಗಿ ನಮೂದಿಸಿರೇವ ಸರ್ಟಿಫಿಕೇಟ್ ಪಡೆದ ಹೊರತು ಸದರೀ ದೇಶದೊಳಗೆ ಪ್ರವೇಶಿಸ ಕೂಡದು.

ಮನುಷ್ಯ ಸಂಬಂಧವಾದ ಹಾಲಿನಿಂದ ಕಿಡುಬು ಹಾಕಿಸಿಕೊಂಡವರು ಈ ರೆಗ್ಯುಲೇಷನಿಗೊಳಪಟ್ಟಿರುವ ಸ್ಥಾನೀಯ ಪ್ರಾಂತದಲ್ಲಿ ಸರ್ಟಿಫಿಕೇಟ್ ಪಡೆಯದೆ ಪ್ರವೇಸಿಸ ಕೂಡದು.

ವ್ಯಾಕ್ಸಿನೇಷನ್ ಸರ್ಕಿಲ್‌ಗಳು.

ಈ ರೆಗ್ಯುಲೇಷನ್ ಜಾರಿಯಾಗತಕ್ಕ ಪ್ರತಿ ಸ್ಥಾನೀಯ ಪ್ರಾಂತವು ಬಂದು ವ್ಯಾಕ್ಸಿನೇಷನ್ ಸರ್ಕಿಲಾಗಿರತಕ್ಕದ್ದು. ಅಥವಾ ಮುಂದೆ ವಿಧಿಸತಕ್ಕ ರೀತಿಯಲ್ಲಿ ಅಂತಾ ಸರ್ಕಿಲ್‌ಗಳಾಗಿ ವಿಭಾಗಿಸಲ್ಪಡತಕ್ಕದ್ದು.

ವ್ಯಾಕ್ಸಿನೇಟರ್‌ಗಳು.

ಅಂತಾ ಪ್ರತಿ ಸರ್ಕಿಲಿಗೆ ಮುಂದೆ ವಿಧಿಸತಕ್ಕ ರೀತಿಯಲ್ಲಿ ಒಬ್ಬನು ಅಥವಾ ಅಧಿಕಮಂದಿ ವ್ಯಾಕ್ಸಿನೇಟರ್‌ಗಳು ಯಾನೆ ಸ್ಪೋಟಕ ಹಾಕತಕ್ಕವರನ್ನು ನೊಕರರ್ ಮಾಡತಕ್ಕದ್ದು, ಮತ್ತು,

ವ್ಯಾಕ್ಸಿನೇರ್ಷ ಸೂಪರ್‌ಟಿಂಡೆಂಟ್.

ಅಂತಾ ಪ್ರತಿ ಸ್ಥಾನೀಯ ಪ್ರಾಂತಕ್ಕೆ ಮುಂದೆ ವಿಧಿಸತಕ್ಕ ರೀತಿಯಲ್ಲಿ ಒಬ್ಬರು ಅಥವಾ ಅಧಿಕಜನ ವ್ಯಾಕ್ಸಿನೇರ್ಷ ಸೂಪರ್‌ಟಿಂಡೆಂಟ್‌ಗಳು ಯಾನೆ ಸ್ಪೋಟಕ ವಿಚಾರಣಾಕರ್ತರನ್ನು ನೊಕರರ್ಮಾಡತಕ್ಕದ್ದು.

ಖುಷ್‌ಬಾಷ್ ವಾಕ್ಸಿನೇಟರ್‌ಗಳು.

8. ಗವರ್ನಮೆಂಟಿನವರು ಲಿಖಿತ ಲೈಸೆನ್ಸ್ ಮೂಲಕ ಯಾವದಾದರು ವ್ಯಾಕ್ಸಿನೇರ್ಷ ಸರ್ಕಿಲ್‌ನಲ್ಲಿ ಸ್ಪೋಟಕ ಹಾಕತಕ್ಕ ಬಗ್ಯೆ ಖುಷ್‌ಬಾಷ್ ವ್ಯಾಕ್ಸಿನೇಟರ್‌ಗಳಿಗೆ ಅಧಿಕಾರ ಕೊಡಬಹುದು, ಮತ್ತು ಅವರು ಅಂತಾ ಯಾವ ಲೈಸೆನ್ಸನ್ನು ಅಮಾನತ್ ಮಾಡಬಹುದು, ಯಾ ರದ್ದು ಮಾಡಬಹುದು.

9. ಈ ರೆಗ್ಯುಲೇಷನಿನ ನಿಯಮಗಳು ಲಗಾವಾಗತಕ್ಕ ಯಾವದಾದರು ಸ್ಥಾನೀಯ ಪ್ರಾಂತದಲ್ಲಿ ಶಿಡುಬು ಹಾಕತಕ್ಕ ಆಯಾಂ ಪೈಕಿ ಬಂದು ತಿಂಗಳ ವರಿವಿಗೆ ಆರು ತಿಂಗಳ ವಯಸ್ಸು ಸಂದ ಕಾಪಾಡಲ್ಪಡದ ಯಾವದಾದರು ಮಗುವು ವಾಸವಾಗಿದ್ದರೆ ಮತ್ತು ಅಂತಾ ಕಾಲವು ಕಳೆಯುವಾಗ್ಯೆ ಹುಡುಗನಾಗಿದ್ದರೆ ಹದಿನಾಲ್ಕು ವರುಷಗಳ, ಮತ್ತು ಘೋಷಾ ಪದ್ಧತಿಯನ್ನನುಸರಿಸತಕ್ಕ ಸಮುದಾಯಕ್ಕೆ ಸೇರಿದ ಹುಡಿಗಿಯಾಗಿದ್ದರೆ ಯೆಂಟು ವರುಷಗಳ ಅಥವಾ ಯಾವದಾದರು ಇತರ ಸಮುದಾಯಕ್ಕೆ ಸೇರಿದ ಹುಡಿಗಿಯಾಗಿದ್ದರೆ ಹತ್ತು ವರುಷಗಳು ವಯಸ್ಸು ಆಗದಿದ್ದರೆ ಅಂತಾ ಮಗುವಿನ ಹೆತ್ತವರು ಯಾ ಗಾರ್ಡಿಯ್ಯ ಸದರೀ ಮಗುವನ್ನು ಶಿಡುಬು ಹಾಕಿಸತಕ್ಕ ಬಗ್ಯೆ ವ್ಯಾಕ್ಸಿನೇಟರ್ ಬಳಿಗೆ ತೆಗದುಕೊಂಡು ಹೋಗತಕ್ಕದ್ದು; ಅಥವಾ ಅದನ್ನು ತೆಗದುಕೊಂಡು ಹೋಗುವಂತೆ ಮಾಡತಕ್ಕದ್ದು ಅಥವಾ ಶಿಡುಬು ಹಾಕತಕ್ಕ ಒಗ್ಯೆ ಬಬ್ಬ ವ್ಯಾಕ್ಸಿನೇಟರನ್ನು ಕರೆಸತಕ್ಕದ್ದು.

ಕಾಪಾಡಲ್ಪಡದ ಮಕ್ಕಳಿಗೆ ಸ್ಮೋಟಕ ಹಾಕಿಸುವಣ.

ಅಂತಾ ವ್ಯಾಕ್ಸಿನೇಟರ್ ಸದರೀ ಮಗುವಿಗೆ ಶಿಡುಬು ಹಾಕಿ ಆ ಮಗುವಿನ ಹೆತ್ತವರಿಗೆ ಯಾ ಗಾರ್ಡಿಯನಿಗೆ ಬಂದು ಮಿಮೋರಾಂಡಂ ಯಾನೆ ಯಾದಾಸ್ತನ್ನು ಕೊಡತಕ್ಕದ್ದು. ಸದರೀ ಯಾದಾಸ್ತಿನಲ್ಲಿ ಶಿಡುಬು ಹಾಕಲ್ಪಟ್ಟ ತಾರೀಖು ಮತ್ತು ಹಾಗೆ ಹಾಕಲ್ಪಟ್ಟದ್ದು ಚೆನ್ನಾಗಿ ಫಲಕಾರಿಯಾದ ಅಂಶವನ್ನು ತಿಳಿದುಕೊಳ್ಳುವ ಬಗ್ಯೆ ಮಗುವನ್ನು ಆಜಮಾಯಿಷೀ ಮಾಡತಕ್ಕ ತಾರೀಖು ಸಹ ನಮೂದಿಸಲ್ಪಟ್ಟಿರತಕ್ಕದ್ದು. ಅಥವಾ ಅಂತಾ ಮಗುವು ಶಿಡುಬು ಹಾಕಲಿಕ್ಕೆ ನಾಲಾಯಖಾದ ಸ್ಥಿತಿಯಲ್ಲಿರುವಂತೆ ಆತನಿಗೆ ಕಂಡುಬಂದರೆ, ಆತನು, ಸದರೀ ಮಗುವಿನ ಹೆತ್ತವರಿಗೆ ಯಾ ಗಾರ್ಡಿಯನಿಗೆ ಚಾಲ್ತೀ ಶಿಡುಬಿನ ಅಯಾಂ ನಲ್ಲೆಲ್ಲ ಅಥವಾ ಆ ಪೈಕಿ ಕೆಲವು ಕಾಲದಲ್ಲಿ ಶಿಡುಬು ಹಾಕಲಿಕ್ಕೆ ಅನರ್ಹವಾದ ಸ್ಥಿತಿಯಲ್ಲಿರುತಿದೆಂಬದಾಗಿ ಸ್ವದಸ್ಕೂರ್ ಬಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು.

ವ್ಯಾಕ್ಸಿನೇಟರ್ ಮಕ್ಕಳಿಗೆ ಶಿಡುಬು ಹಾಕತಕ್ಕದ್ದು ಅಥವಾ ಅದು ತಜಿದಿಡಲ್ಪಟ್ಟ ಬಗ್ಯೆ ಸರ್ಟಿಫಿಕೇಟ್‌ಗಳನ್ನು ಕೊಡತಕ್ಕದ್ದು.

10. ಹೆತ್ತವರು ಯಾ ಗಾರ್ಡಿಯ್ಯ ಶಿಡುಬು ಹಾಕತಕ್ಕ ಬಗ್ಯೆ ತಮ್ಮ ಮನೆಗೆ ಬರಬೇಕೆಂಬದಾಗಿ ವ್ಯಾಕ್ಸಿನೇಟರನ್ನು ಕೇಳುವರಾದರೆ ಆತನು ಅದೇ ಪ್ರಕಾರ ಹೋಗಲಿಕ್ಕೆ ಬದ್ಧನಾಗಿರತಕ್ಕದ್ದು.

ಹೆತ್ತವರಿಂದ ಯಾ ಗಾರ್ಡಿಯನ್ನಿಂದ ಅಪೇಕ್ಷಿಸಲ್ಪಟ್ಟರೆ ಶಿಡುಬು ಹಾಕತಕ್ಕ ಬಗ್ಯೆ ಅವರ ಸ್ವಂತ ಮನೆಗಳಿಗೆ ಹೋಗಲಿಕ್ಕೆ ವ್ಯಾಕ್ಸಿನೇಟರ್ ಬದ್ಧನಾಗಿರತಕ್ಕದ್ದು.

ವಾಕ್ಸಿನೇಟರ್, ಹಾಗೆ ಹೋಗುವದಕ್ಕೆ ಆಶಕ್ತನಾಗಿದ್ದಾಗ ಅದನ್ನು ತಾನು ಹಾಜರಾಗುವದಕ್ಕೆ ಸಾಧ್ಯವಾಗಿರತಕ್ಕ ಗೊತ್ತಾದ ಕಾಲವನ್ನೂ ನಮೂದಿಸಿ ಸ್ವದಸ್ಕೂರ್ ಬಂದು ಯಾದಾಸ್ತನ್ನು ಹೆತ್ತವರಿಗೆ ಯಾ ಗಾರ್ಡಿಯನಿಗೆ ಕೊಡತಕ್ಕದ್ದು, ಮತ್ತು ಅಂತಾ ಯಾದಾಸ್ತನ್ನು ಒಬ್ಬ ವ್ಯಾಜಿಸ್ಟ್ರೇಟರ ಮುಂದೆ ಹಾರ್ವಾಜಡಿದರೆ, ಅಂತಾ ಮಧ್ಯಕಾಲದೊಳಗೆ ಆ ಮಗುವಿಗೆ ಶಿಡುಬು ಹಾಕಿಸದೆ ಹೋದದಕ್ಕೆ ಹತ್ತೊಂಭತ್ತನೇ ಸೆಕ್ಷನ್ ಪ್ರಕಾರ ಅದೇ ಸಾಕಾದ ಸಮಾಧಾನವಾಗಿ ಭಾವಿಸಲ್ಪಡತಕ್ಕದ್ದು.

ವ್ಯಾಕ್ಸಿನೇಟರು ತಾನು ಹೋಗುವದಕ್ಕೆ ಆಶಕ್ತನಾಗಿರುವಾಗ ಬಂದು ಯಾದಾಸ್ತನ್ನುಕೊಡತಕ್ಕದ್ದು.

11. ಬಂಭತ್ತನೆಯ ಸೆಕ್ಷನ್ ಅನುಸರಿಸಿ ಶಿಡುಬು ಹಾಕಲ್ಪಟ್ಟ ಪ್ರತಿಮಗುವಿನ ಹೆತ್ತವರು ಯಾ ಗಾರ್ಡಿಯ್ಯ, ಯಾದಾಸ್ತಿನಲ್ಲಿ ನಮೂದಿಸಿರುವ ತನಿಖೆಯ ತಾರೀಖಿನಲ್ಲಿ ಸದರೀ ಮಗುವನ್ನು ಆಜಮಾಯಿಷಿಯ ಬಗ್ಯೆ ಬಬ್ಬ ವ್ಯಾಕ್ಸಿನೇಟರ ಬಳಿಗೆ ತೆಗದುಕೊಂಡು ಹೋಗತಕ್ಕದ್ದು ಯಾ ತೆಗದುಕೊಂಡು ಹೋಗುವಂತೆ ಮಾಡತಕ್ಕದ್ದು, ಅಥವಾ ಒಬ್ಬ ವ್ಯಾಕ್ಸಿನೇಟರ್‌ನಿಂದ ತಮ್ಮ ಮನೆಯಲ್ಲೇ ಆಜಮಾಯಿಷೀ ಮಾಡಿಸತಕ್ಕದ್ದು; ಮತ್ತು ಅಂತಾ ವ್ಯಾಕ್ಸಿನೇಟರು ಸದರೀ ಮಗುವು ಆಜಿಮಾಯಿಷೀ ಮಾಡಲ್ಪಟ್ಟದ್ದನ್ನೂ ಅಂತಾ ಆಜಮಾಯಿಷಿಯ ಫಲಿತಾಂಶವನ್ನೂ ನಮೂದಿಸಿ ಬಂದು ಸರ್ಟಿಫಿಕೇಟನ್ನು ಸದರೀ ಯಾದಾಸ್ತಿನೊಡನೆ ಸೇರಿಸತಕ್ಕದ್ದು.

ಶಿಡುಬು ಹಾಕಲ್ಪಟ್ಟ ಮೇಲೆ ಆಜಮಾಯಿಷಿ.

12. ಹನ್ನೊಂದನೆಯ ಸೆಕ್ಷನ್ ಪ್ರಕಾರ ಬಂದು ಮಗುವನ್ನು ಆಜಮಾಯಿಷೀ ಮಾಡುವ ಕಾಲದಲ್ಲಿ ಶಿಡುಬು ಹಾಕಿದ್ದು ಫಲಕಾರಿಯಾದಂತೆ ಗೊತ್ತು ಮಾಡಲ್ಪಟ್ಟಾಗ ಆ ಬಗ್ಯೆ ವ್ಯಾಕ್ಸಿನೇಟರು ಸದರೀ ಮಗುವಿನ ಹೆತ್ತವರಿಗೆ ಯಾ ಗಾರ್ಡಿಯನಿಗೆ ಬಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು, ಆ ತರುವಾಯ ಅಂತಾ ಮಗುವು ಕಾಪಾಡಲ್ಪಟ್ಟಿದ್ದೆಂದು ಭಾವಿಸಲ್ಪಡತಕ್ಕದ್ದು.

ಶಿಡುಬು ಹಾಕಲ್ಪಟ್ಟದ್ದು ಫಲಕಾರಿಯೆಂದು ಕಂಡುಬಂದ ಬಳಿಕ ನಡೆಸಬೇಕಾದ ನಡವಡಿಕೆ.

13. ಮೇಲೆ ತಿಳಿಸಿದಂತೆ ಶಿಡುಬು ಹಾಕಲ್ಪಟ್ಟದ್ದು ವಿಫಲವೆಂದು ಗೊತ್ತುಮಾಡಲ್ಪಟ್ಟಾಗ ಹೆತ್ತವರು ಯಾ ಗಾರ್ಡಿಯನ್ ವ್ಯಾಕ್ಸಿನೇಟರ್ ಆ ರೀತಿ ನಿಯಮಿಸುವ ಪಕ್ಷಕ್ಕೆ, ಸದರೀ ಮಗುವಿಗೆ ಮತ್ತೊಂದಾವರ್ತಿ ಕೂಡಲೇ ಶಿಡುಬು ಹಾಕಿಸತಕ್ಕದ್ದಲ್ಲದೆ ತರುವಾಯ ಹಿಂದೆ ವಿಧಿಸಿದ ರೀತಿಯಲ್ಲಿ ಅಜಮಾಯಿಷೀ ಮಾಡಿಸತಕ್ಕದ್ದು.

ಶಿಡುಬು ಹಾಕಲ್ಪಟ್ಟದ್ದು ವಿಫಲವಾದಾಗ ನಡಿಸಬೇಕಾದ ನಡವಡಿಕೆ.

14. ಒಂದು ಮಗುವು ಶಿಡುಬು ಹಾಕಲಿಕ್ಕೆ ಅನರ್ಹವಾಗಿದೆ ಯೆಂಬದಾಗಿ ನಮೂದಿಸಿ ಒಂಭತ್ತನೆಯ ಸೆಕ್ಷನ್ ಪ್ರಕಾರ ಕೊಡಲ್ಪತಕ್ಕ ಸರ್ಟಿಫಿಕೇಟ್ ಅದರಲ್ಲಿ ನಮೂದಿಸಿರುವ ಕಾಲಪರಿಮಾಣದವರಿಗೆ ಜಾರಿಯಲ್ಲಿರತಕ್ಕದ್ದು. ಆ ವಾಯಿದೆಯು ಶಿಡುಬು ಹಾಕತಕ್ಕ ಅಯಾಂ ಕಳೆದ ಮೇಲೆ ಪೂರೈಸಿದರೆ, ಮುಂದಿನ ಶಿಡುಬಿನ ಅಯಾಂ ಷುರುವಾದಾಗ ಅಂತಾ ಮಗುವಿನ ಹೆತ್ತವರು ಯಾ ಗಾರ್ಡಿಯನ್ ಶಿಡುಬು ಹಾಕತಕ್ಕ ಬಗ್ಗೆ ಸದರೀ ಮಗುವನ್ನು ಬಬ್ಬ ವ್ಯಾಕ್ಸಿನೇಟರ ಬಳಿಗೆ ತೆಗದುಕ್ಕೊಂಡು ಹೋಗತಕ್ಕದ್ದು, ಯಾ ತೆಗದುಕೊಂಡು ಹೋಗುವಂತೆ ಮಾಡತಕ್ಕದ್ದು, ಅಥವಾ ತಮ್ಮ ಸ್ವಂತ ಮನೆಯಲ್ಲಿ ವ್ಯಾಕ್ಸಿನೇಟರ್ ಮೂಲಕ ಅದಕ್ಕೆ ಶಿಡುಬು ಹಾಕಿಸತಕ್ಕದ್ದು.

ಶಿಡುಬು ಹಾಕಲಿಕ್ಕೆ ಮಗುವು ಅನರ್ಹವಾಗಿದ್ದಾಗ ನಡಿಸಬೇಕಾದ ನಡವಡಿಕೆ.

ಪರಂತು ಇನ್ನೂ ಸದರೀ ಮಗುವು ಶಿಡುಬು ಹಾಕಲಿಕ್ಕೆ ಅನರ್ಹವಾದ ಸ್ಥಿತಿಯಲ್ಲಿರುವಂತೆ ಕಂಡು ಬಂದರೆ ಒಂಭತ್ತನೆಯ ಸೆಕ್ಷನ್ ಪ್ರಕಾರ ಕೊಡಲ್ಪಟ್ಟಿದ್ದ ಸರ್ಟಿಫಿಕೇಟ್ ಮರಳಿ ಹೊಸದಾಗಿ ಕೊಡಲ್ಪಡತಕ್ಕದ್ದು.

ನಿಲ್ಲಿಸಿಟ್ಟಬಗ್ಗೆ ಕೊಡಲ್ಪಟ್ಟ ಸರ್ಟಿಫಿಕೇಟುಗಳ ಬದಲಾವಣಿ.

15. ಮೂರಾವರ್ತಿ ನಿಷ್ಫಲವಾಗಿ ಶಿಡುಬು ಹಾಕಲ್ಪಟ್ಟ ನೊಂದು ಮಗುವು, ಸಫಲವಾಗುವಂತೆ ಶಿಡುಬು ಹಾಕಲಿಕ್ಕೆ ಅನರ್ಹವಾಗಿರುವಂತೆ ವ್ಯಾಕ್ಸಿನೇಷನ್ ಸೂಪರ್ಡಿಟೆಂಡೆಂಟರು ಅಭಿಪ್ರಾಯ ಪಡುವ ಪಕ್ಷಕ್ಕೆ ಆ ಬಗ್ಗೆ ಅವರು ಸ್ವದಸ್ತ್ಕಾರ್ ಬಂದು ಸರ್ಟಿಫಿಕೇಟನ್ನು ಸದರೀ ಮಗುವಿನ ಹೆತ್ತವರಿಗೆ ಯಾ ಗಾರ್ಡಿಯನಿಗೆ ಕೊಡತಕ್ಕದ್ದು; ಮತ್ತು ಆ ಲಾಗಾಯತು ಸದರೀ ಹೆತ್ತವರು ಯಾ ಗಾರ್ಡಿಯನ್ ಆ ಮಗುವಿಗೆ ಶಿಡುಬು ಹಾಕಿಸಬೇಕಾದ್ದಿಲ್ಲವು.

ಫಲಕಾರಿಯಾಗುವಂತೆ ಶಿಡುಬು ಹಾಕುವದಕ್ಕೆ ಅನರ್ಹವೆಂಬುವ ಬಗ್ಗೆ ಸರ್ಟಿಫಿಕೇಟ್‌ಗಳು.

16. ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಡತಕ್ಕ ರೂಲ್ಸುಗಳಲ್ಲಿ ವಿಧಿಸಬಹುದಾದಂತಾ ಹಾಲಿನಿಂದ ಸಾಮಾನ್ಯವಾಗಿ ಬಂದು ಮಗುವಿಗೆ ಶಿಡುಬು ಹಾಕತಕ್ಕ ಕ್ರಮವು ಜರಿಗಿಸತಕ್ಕದ್ದು: ಪರಂತು—

ಯಾವ ಹಾಲನ್ನು ಪಯೋಗಿಸತಕ್ಕದ್ದು.

1ನೇದು,—ಗೋ ಸಂಬಂಧವಾದ ಹಾಲು ಹಾಗೆ ವಿಧಿಸಲ್ಪಟ್ಟದ್ದು, ಯಾವದಾದರು ಮಗುವಿನ ಹೆತ್ತವರು ಯಾ ಗಾರ್ಡಿಯನ್ ಮನುಷ್ಯ ಸಂಬಂಧವಾದ ಹಾಲಿನಿಂದಲೇ ತಮ್ಮ ಮಗುವಿಗೆ ಶಿಡುಬು ಹಾಕಬೇಕೆಂಬದಾಗಿ ಅಪೇಕ್ಷಿಸುವ ಪಕ್ಷಕ್ಕೆ ಆ ರೀತಿ ಹಾಕತಕ್ಕದ್ದು; ಮತ್ತು

2ನೇದು,—ಗೋ ಸಂಬಂಧವಾದ ಹಾಲು ದೊರೆಯತಕ್ಕಂತಾ ಯಾವದಾದರು ಸ್ಥಾನೀಯ ಪ್ರಾಂತದಲ್ಲಿ ಮನುಷ್ಯ ಸಂಬಂಧವಾದ ಹಾಲು ಹಾಗೆ ವಿಧಿಸಲ್ಪಟ್ಟ ಯಾವದಾದರು ಮಗುವಿನ ಹೆತ್ತವರು ಯಾ ಗಾರ್ಡಿಯನ್ ಅಂತಾ ಮಗುವಿಗೆ ಗೋ ಸಂಬಂಧವಾದ ಹಾಲಿನಿಂದಲೆ ಶಿಡುಬು ಹಾಕಬೇಕೆಂಬದಾಗಿ ಕೋರಿ, ಆ ಬಗ್ಗೆ ಮೇಲೆ ಕಂಡ ರೂಲ್ಸಿನಿಂದ ಗೊತ್ತುಮಾಡಲ್ಪಡಬಹುದಾದ ಬಂದು ರೂಪಾಯಿಗೆ ಮಿಾರದ ರುಸುಂ ಯೇನಾದರು ಇದ್ದರೆ ಅದನ್ನು ಕೊಡುವಂತೆ ವ್ಯಾಕ್ಸಿನೇಟರಿಗೆ ತಿಳಿಸುವ ಪಕ್ಷಕ್ಕೆ ಅದೇ ರೀತಿ ಮಗುವಿಗೆ ಶಿಡುಬು ಹಾಕತಕ್ಕದ್ದು.

17. ಬಂದು ವ್ಯಾಕ್ಸಿನೇಷನ್ ಸರ್ಕಲ್ ಪೈಕಿ ಸರ್ಕಾರೀಯಾಗಿ ಸ್ಥಾಪಿಸಲ್ಪಟ್ಟಿರುವ ವ್ಯಾಕ್ಸ್ಸಿನ್ ಸ್ಟೇಷನ್ ಅಂದರೆ ಶಿಡುಬು ಹಾಕತಕ್ಕ ಸ್ಥಳದಲ್ಲಿ ಶಿಡುಬು ಹಾಕಲ್ಪಟ್ಟರೆ ಖುಷ್‌ಬಾಷ್ ವ್ಯಾಕ್ಸಿನೇಟರಿಂದ ವಿನಾ ಇತರ ಯಾವ ವ್ಯಾಕ್ಸಿನೇಟರಿಂದಲೂ, ಅಂತಾ ಮಗುವಿನ ಹೆತ್ತವರು ಯಾ ಗಾರ್ಡಿಯನ್ನಿಂದ, ಈ ರೆಗ್ಯುಲೇಷನಿನ ನಿಬಂಧನೆಗಳನ್ನನುಸರಿಸಿ, ಸದರೀ ವ್ಯಾಕ್ಸಿನೇಟರಿಗೆ ವಿಧಿಸಲ್ಪಟ್ಟ ಕೆಲಸಗಳ ಪೈಕಿ ಯಾವದಕ್ಕಾಗಲಿ ರುಸುಂ ಯೇನೂ ವಸೂಲ್ಮಾಡಲ್ಪಡಕೂಡದು.

ಖುಷ್‌ಬಾಷ್ ವ್ಯಾಕ್ಸಿನೇಟರಿಂದ ವಿನಾ ರುಸುಂ ವಸೂಲ್ಮಾಡತಕ್ಕದ್ದಲ್ಲವು.

ಪರಂತು ಬಂದು ವ್ಯಾಕ್ಸಿನೇಷ್ಟ ಸರ್ಕಿಲ್‌ನಲ್ಲಿಲ್ಲದೆ ಅನ್ಯತ್ರ ಒಂದು ಮಗುವಿಗೆ ಅದರ ಹೆತ್ತವರು ಯಾ ಗಾರ್ಡಿಯನಿನ ಕೋರಿಕೆಯ ಪ್ರಕಾರ ಶಿಡುಬು ಹಾಕಿದರೆ ಆ ಬಗ್ಗೆ ರುಸುವನ್ನು ಆಂಗೀಕರಿಸುವಣವು ಬಬ್ಬ ವ್ಯಾಕ್ಸಿನೇಟರಿಗೆ ನ್ಯಾಯವಾಗಿರತಕ್ಕದ್ದು.

ನಿಯಮ.

18. ಬಬ್ಬ ವ್ಯಾಕ್ಸಿನೇಷ್ಟ ಸೂಪರ್‌ಟೆಂಡೆಂಟರಿಗೆ ಈ ರೆಗ್ಯುಲೇಷನಿನ ನಿಯಮಗಳಿಂದ ಅಥವಾ ಅವುಗಳನ್ನನುಸರಿಸಿ ವಿಧಿಸಲ್ಪಟ್ಟಿರುವ ಇತರ ಕೆಲಸಗಳೊಡನೆ ತಮ್ಮ ವಿಚಾರಣೆಗೊಳಪಟ್ಟಿರುವ ಸ್ಥಾನೀಯ ಪ್ರಾಂತದಲ್ಲಿರುವಂತಾ, ಹುಡುಗನಾಗಿದ್ದರೆ ಹದಿನಾಲ್ಕು ವರುಷಗಳಿಗೊಳಪಟ್ಟಿರುವ ಮತ್ತು ಗೋಷಾ ಪದ್ಧತಿಯನ್ನನುಸರಿಸತಕ್ಕ ಸಮುದಾಯಕ್ಕೆ ಸೇರಿದ ಹುಡಿಗಿಯರಾಗಿದ್ದರೆ ಎಂಟು ವರುಷಗಳಿಗೊಳಪಟ್ಟ ಅಥವಾ ಇತರ ಸಮುದಾಯಕ್ಕೆ ಸೇರಿದ ಹುಡುಗಿಯರಾಗಿದ್ದರೆ ಹತ್ತು ವರುಷಗಳಿಗೊಳಪಟ್ಟ ವಯಸ್ಸುಳ್ಳ ಕಾಮಾಡಲ್ಪಡದ ಮಕ್ಕಳಿಲ್ಲಕ್ಕೂ ಶಿಡುಬು ಹಾಕಲ್ಪಟ್ಟಿದ್ದನ್ನು ವಿಚಾರಿಸತಕ್ಕದ್ದು, ಅಂತಾ ಯಾವ ಮಗುವಿನ ಹೆತ್ತವರು ಯಾ ಗಾರ್ಡಿಯರ್ ಸದರೀ ಮಗುವಿಗೆ ಶಿಡುಬು ಹಾಕಿಸುವದಕ್ಕೂ ಅಥವಾ ಅದನ್ನು ಅಜಮಾಯಿಷಿಗೊಳಪಡಿಸಲಿಕ್ಕೂ ಇದರ ಹಿಂದೆ ತಿಳಿಸಲ್ಪಟ್ಟ ನಿಯಮಗಳಿಗೆ ಬದ್ಧರಾಗಿರುತ್ತಾರೆಂತಲೂ, ಮತ್ತು ಅವರು ಆ ರೀತಿ ಮಾಡದೆ ತಪ್ಪಿದರೆಂತಲೂ ನಂಬಲಿಕ್ಕೆ ಕಾರಣ ಸದರೀ ಸೂಪರ್‌ಟೆಂಡೆಂಟರಿಗೆ ಕಂಡುಬಂದ ಪಕ್ಷಕ್ಕೆ ಅಂತಾ ಹೆತ್ತವರು ಯಾ ಗಾರ್ಡಿಯರ್ ಮನೆಗೆ ಅವರು ಸ್ವತಃ ಹೋಗಿ ಅಲ್ಲಿ ವಿಚಾರಣೆ ಮಾಡಿ ಸದರೀ ಅಂಶವು ರುಜುವಾತ್ತಾಗುವ ಪಕ್ಷಕ್ಕೆ ಕೂಡಲೇ ಆ ಹೆತ್ತವರು ಯಾ ಗಾರ್ಡಿಯನಿಗೆ ಒಂದು ನೋಟಿಸನ್ನು ಪಾವತೀ ಮಾಡತಕ್ಕದ್ದು ಅಥವಾ ಅತನ ವನೆಯ. ಮೇಲೆ ಅಂಟಿಸುವಂತೆಯಾದರು ಮಾಡತಕ್ಕದ್ದು. ಸದರೀ ನೋಟಿಸಿನಲ್ಲಿ ತಿಳಿಸಲ್ಪಡುವ ಕಾಲ ಮತ್ತು ಸ್ಥಳದಲ್ಲಿ, ಸಂದರ್ಭಾನುಸಾರ ಮಗುವಿಗೆ ಶಿಡುಬು ಹಾಕಿಸತಕ್ಕದ್ದು ಅಥವಾ ಆಜಮಾಯಿಷೀ ಬಗ್ಗೆ ಹಾಜರ್ಮಾಡತಕ್ಕದ್ದೆಂದು ನಮೂದಾಗಿರತಕ್ಕದ್ದು.

ವ್ಯಾಕ್ಸಿನೇಷ್ಟ ಸೂಪರ್‌ಟೆಂಡೆಂಟರ ಕೆಲಸಗಳು.

ರೆಗ್ಯುಲೇಷನಿನಂತೆ ನಡೆಯಲಿಕ್ಕು ಪೇಕ್ಷಿಸಿದ ಹೆತ್ತವರು ಯಾ ಗಾರ್ಡಿಯನಿಗೆ ನೋಟಿಸ್.

19. ಅಂತಾ ನೋಟಿಸಿನಂತೆ ನಡೆಯದ ಪಕ್ಷಕ್ಕೆ ವ್ಯಾಕ್ಸಿನೇಷ್ಟ ಸೂಪರ್‌ಟೆಂಡೆಂಟರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗಾಗಲಿ ಅಥವಾ ಗವರ್ಮೆಂಟಿನವರು ಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಆಗಿಂದಾಗ್ಗೆ ಇದಕ್ಕಾಗಿ ಮೊಕರರ್ಮಾಡಬಹುದಾದ ಮ್ಯಾಜಿಸ್ಟ್ರೇಟರಿಗಾಗಲಿ ಕೂಡಲೇ ರಿಪೋರ್ಟು ಮಾಡತಕ್ಕದ್ದು; ಸದರೀ ಮ್ಯಾಜಿಸ್ಟ್ರೇಟರು ರಿಪೋರ್ಟನ್ನು ಬರಮಾಡಿಕೊಂಡು ಮಗುವಿನ ಹೆತ್ತವರು ಯಾ ಗಾರ್ಡಿಯನನ್ನು ಸಮ್ಮರ್ಸ ಮೂಲಕ ಕರಿಸಿ ಆತನು ತಿಳಿಸುವ ಸಮಾಧಾನವೆಂ ಕೇಳಿ, ಅಂತಾ ಸಮಾಧಾನವು ತೃಪ್ತಿಕರವಾಗಿಲ್ಲದಿದ್ದರೆ ಲಿಖಿತ ಮೂಲಕ ಬಂದು ಹುಕುಂನಲ್ಲಿ ನಮೂದಿಸುವ ತಾರಿಖಿನೊಳಗಾಗಿ ಸದರೀ ನೋಟಿಸಿನಂತೆ ನಡೆಯುತಕ್ಕದ್ದೆಂದು ಅಂತಾ ಹೆತ್ತವರು ಯಾ ಗಾರ್ಡಿಯನಿಗೆ ವಿಧಿಸತಕ್ಕದ್ದು.

ನೋಟೀಸಿನಂತೆ ನಡೆಯದ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟರ ಹುಕುಂ.

ಅಂತಾ ತಾರೀಖಿನಲ್ಲಿ ಹುಕುಮನ್ನನುಸರಿಸಿ ನಡದುಕೊಳ್ಳದ ಪಕ್ಷಕ್ಕೆ ಮ್ಯಾಜಿಸ್ಟ್ರೇಟರು ಹೆತ್ತವರು ಯಾ ಗಾರ್ಡಿಯನನ್ನು ತಮ್ಮ ರೂಬರೂಬ್ ಕರೆಯಿಸಿ, ಅವರು ನ್ಯಾಯವಾದ ಅಥವಾ ಮನ್ನಿಸಲಿಕ್ಕೆ ಹರ್ವಾದ ಕಾರಣವನ್ನು ತೋರಿಸಿದ ಹೊರ್ತು ಸದರೀ ಅವಿಧೇಯತೆಯ ವಿಷಯದಲ್ಲಿ ಇಪ್ಪತ್ತು ಮೂರನೆಯ ಸೆಕ್ಷ್ಯ ಪ್ರಕಾರ ದಂಡನಾರ್ಹವಾಗಿರುವ ತಕ್ಕೀರ್ ತರೀಕ್ ನಡೆಸತಕ್ಕದ್ದು.

ಹುಕುಮಿಗೆ ವಿಧೇಯರಾಗಿ ನಡೆದುಕೊಳ್ಳದೆ ಹೋದರೆ ನಡಿಸಬೇಕಾದ ನಡವಳಿತ.

ಈ ಸೆಕ್ಷ್ಯ ಪ್ರಕಾರ ಮೊಕರರಾದ ಮ್ಯಾಜಿಸ್ಟ್ರೇಟ್‌ಗಳು ಅನುಕೂಲವಾಗಿ ಸಾಧ್ಯವಾಗುವ ತನಕ ಆಸಪಾಸ್ ಪ್ರದೇಶದ ನಿವಾಸಿಗಳಾಗಿರಬೇಕೇ ಹೊರ್ತು ಗವರ್ಮೆಂಟಿನಿಂದ ತಲಬ್ ಪಡೆಯುವ ನವುಕರರಾಗಿರತಕ್ಕದ್ದಲ್ಲವು.

ಮ್ಯಾಜಿಸ್ಟ್ರೇಟಗಳು ಸರ್ಕಾರ್ ನವುಕರರಲ್ಲದ ನೇಟಿವ್‌ಗಳಾಗಿರತಕ್ಕದ್ದು.

20. ಯಾವದಾದರು ಮ್ಯೂನಿಸಿಪಾಲಿಟಿಗೆ ಅಥವಾ ಅದರ ಪೈಕಿ ಯಾವದಾದರು ಭಾಗಕ್ಕೆ ಈ ರೆಗ್ಯುಲೇಷ್ಟ ಲಗಾವಾದಾಗ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಈ ರೆಗ್ಯುಲೇಷನಿಗೆ ಅನುಗುಣವಾಗಿರುವಂತೆ ಅದು ಲಗಾವಾಗುವಂತಾ ಸರಹದ್ದಿನೊಳಗಾಗಿ ಅದನ್ನು ಸರಿಯಾಗಿ ಅಮಲ್‌ನಲ್ಲಿ ತರತಕ್ಕ ಬಗ್ಗೆ ಆಗಿಂದಾಗ್ಗೆ ರೂಲ್‌ಗಳನ್ನು ಮಾಡಬಹುದು. ಸದರೀ ರೂಲ್‌ಗಳನ್ನು, ಕಮ್ಮಿಷನರ್‌ಗಳು, ಮ್ಯೂನಿಸಿಪಲ್ ಸರಹದ್ದಿನೊಳಗಾಗಿ ಇತರ ವಿಷಯಗಳ

ಮ್ಯೂನಿಸಿಪಾಲಿಟಿಗಳಿಗಾಗಿ ರೂಲ್‌ಗಳನ್ನು ಮಾಡುವದಕ್ಕೆ ಅಧಿಕಾರ.

ವ್ಯವಸ್ಥೆಯ ಬಗ್ಗೆತತ್ಕಾಲದೊಳು ಜಾರಿಯಲ್ಲಿರತಕ್ಕ ಕಾನೂನಿನಂತೆ ರೂಲ್‌ಗಳನ್ನು ಆಥವಾ ಬೈಲಾಸ್‌ಯಾನೆ ಉಪನಿಬಂಧನೆಗಳನ್ನು ಮಾಡುವಂತೆ ಮಾಡತಕ್ಕದ್ದು. ಅವು ಗವರ್ಮೆಂಟಿನವರಿಂದ ಕಾಯಂ ಮಾಡಲ್ಪಟ್ಟು ಸರ್ಕಾರೀ ಗೆಜಟಿನಲ್ಲಿ ಘಾಯಿಷ್ ಮಾಡಲ್ಪಟ್ಟ ಬಳಿಕ ಕಾನೂನಿನ ಶಕ್ತಿವುಳ್ಳವಾಗಿರತಕ್ಕದ್ದು. ಪರಂತು ಅಂತಾ ಯಾವ ರೂಲನ್ನಾದರು ಗವರ್ಮೆಂಟಿನವರು ಯಾವ ಕಾಲದಲ್ಲಾಗಲಿ ರದ್ದು ಯಾ ತಿದ್ದುಪಡಿ ಮಾಡಬಹುದು.

21. ಈ ರೆಗ್ಯುಲೇಷ್ಞ ಮ್ಯೂನಿಸಿಪಾಲಿಟಿಯಲ್ಲದ ಇತರ ಯಾವದಾದರು ಸ್ಥಾನೀಯ ಪ್ರಾಂತಕ್ಕೆಅನ್ವಯಿಸಲ್ಪಟ್ಟಾಗ ಗವರ್ಮೆಂಟಿನವರು ಆಗಿಂದಾಗ್ಗೆ ಅಂತಾ ರೂಲ್‌ಗಳನ್ನು ಮಾಡಬಹುದು.

ಮ್ಯೂನಿಸಿಪಾಲಿಟಿಗಳಲ್ಲದ ಇತರ ಸ್ಥಾನೀಯ ಪ್ರಾಂತಗಳ ಬಗ್ಗೆ ರೂಲ್‌ಗಳನ್ನು ಮಾಡಲಿಕ್ಕೆ ಅಧಿಕಾರ.

22. ಇಪ್ಪತ್ತು ವ ಇಪ್ಪತ್ತೊಂದನೇ ಸೆಕ್ಷ್ಞಗಳ ಪ್ರಕಾರ ಯಾವದಾದರು ಸ್ಥಾನೀಯ ಪ್ರಾಂತಕ್ಕಾಗಿ ಮಾಡಲ್ಪಡತಕ್ಕ ರೂಲ್‌ಗಳು ಇತರ ವಿಷಯಿಗಳನ್ನಲ್ಲದೆ ವಿಧಿಸಬಹುದಾದದ್ದೇನೆಂದರೆ.

ಇಪ್ಪತ್ತು ವ ಇಪ್ಪತ್ತೊಂದನೇ ಸೆಕ್ಷ್ಞಗಳ ಪ್ರಕಾರ ರೂಲ್‌ಗಳು ಯಾವದನ್ನು ವಿಧಿಸಬಹುದು.

(a) ಶಿಡುಬು ಹಾಕತಕ್ಕ ಬಗ್ಗೆ ಅಂತಾ ಸ್ಥಾನೀಯ ಪ್ರಾಂತವನ್ನು ಸರ್ಕಿಲ್‌ಗಳಾಗಿ ವಿಂಗಡಿಸುವಣ;

(b) ಪ್ರತಿ ವ್ಯಾಕ್ಸಿನೇಷ್ಞ ಸರ್ಕಿಲ್‌ನಲ್ಲಿ ಬಂದು ಪಬ್ಲಿಕ್ ವ್ಯಾಕ್ಸ್ಞೈ ಸ್ಟೇಷನಿಗೆ ಸ್ಥಳವನ್ನು ಗೊತ್ತುಮಾಡುವಣ; ಅಂತಾ ಸ್ಟೇಷನಿನ ಸವಿಾಪದಲ್ಲಿ ಬಹಿರಂಗವಾದ ಸ್ಥಳದೊಳು ಯಾವದಾದರು ಸ್ಪಷ್ಟವಾದ ಗುರ್ತನ್ನು ನೆಲಗೊಳಿಸುವಣ,

(c) ಸರ್ಕಾರಿ ತರಫ್ ವ್ಯಾಕ್ಸಿನೇಟರ್‌ಗಳಿಗೂ ವ್ಯಾಕ್ಸಿನೇಷ್ಞ ಸೂಪರ್ಡಿಟೆಂಡೆಂಟ್‌ಗಳಿಗೂ ಆವಶ್ಯಕಗಳಾದ ಯೋಗ್ಯತೆಗಳು;

(d) ಆವರನ್ನು ಮೊಕರರ್ರ್ಮಾಡುವ, ಸಸ್‌ಪೆಂಡ್ ಮಾಡುವ ಮತ್ತು ಬರತರಫ್ ಮಾಡುವ ಅಧಿಕಾರವು ಯಾರಿಗೆ ಸೇರಿರತಕ್ಕದ್ದು;

(e) ಪಬ್ಲಿಕ್ ವ್ಯಾಕ್ಸಿನೇಟರ್‌ಗಳು ವ್ಯಾಕ್ಸ್ಞೈ ಸ್ಟೇಷ್ಞಗಳಿಗೆ ಹಾಜರಾಗತಕ್ಕ ಕಾಲ ವ್ಯಾಕ್ಸಿನೇಷ್ಞ ಸರ್ಕಿಲ್‌ಗಳ ಸರಹದ್ದಿನೊಳಗೆ ಅವರು ವಾಸವಾಗಿರತಕ್ಕದ್ದು;

(f) ಅವರಿಂದ ಧರಿಸಲ್ಪಡಬೇಕಾದ ಸ್ಪಷ್ಟವಾದ ಗುರ್ತು ಯಾ ಬಿಲ್ಲೆ;

(g) ಖುಷ್‌ಬಾಷ್ ವ್ಯಾಕ್ಸಿನೇಟರ್‌ಗಳು ವಸೂಲ್ಮಾಡಬಹುದಾದ ರುಸುಂ ಮೊಬಲಗು ಮತ್ತು ಸಾವಮಾನ್ಯವಾಗಿ ಅದರ ಕೆಲಸಗಳನ್ನು ನೆರವೇರಿಸುವ ಬಗ್ಗೆ ಅನುಸರಿಸಬೇಕಾದ ನಡವಡಿಕೆ,

(h) ಜನಗಳ ಸ್ವಂತ ಗೃಹಗಳಲ್ಲೇ ಅವರ ಮಕ್ಕಳಿಗೆ ಶಿಡುಬು ಹಾಕಿಸುವ ವಿಷಯದಲ್ಲಿ ಅವರಿಗೆಯಂಟು ಮಾಡಬೇಕಾದ ಸಾಲಬ್ಯಗಳು;

(i) ಶಿಡುಬು ಹಾಕಿದ್ದು ಫಲಕಾರಿಯಾದದ್ದು, ಶಿಡುಬು ಹಾಕಲಿಕ್ಕೆ ನಾಲಾಯಕಾಗಿರತಕ್ಕದ್ದು, ಅಥವಾ ಶಿಡುಬನ್ನು ಗ್ರಹಿಸಲಾರದೆ ಇರುವದು, ಇವುಗಳ ಬಗ್ಗೆ ಸರ್ಟಿಫಿಕೇಟ್‌ಗಳನ್ನು ಕೊಡುವಣ ಮತ್ತು ಅವುಗಳ ನಮೂನೆ;

(j) ಉಪಯೋಗಿಸಲ್ಪಡತಕ್ಕ ಹಾಲಿನ ಸ್ವಭಾವ ಮತ್ತು ಅಂತಾ ಹಾಲನ್ನು ಬೇಕಾದಷ್ಟು ಬದಗಿಸುವಣ;

(ಹದಿನಾರನೆಯ ಸೆಕ್ಷ್ಞ ಪ್ರಕಾರಗೋ ಸಂಬಂಧವಾದ ಹಾಲನ್ನು ವುಪಯೋಗಿಸಿ ಶಿಡುಬು ಹಾಕತಕ್ಕ ಬಗ್ಗೆ, ಯೇನಾದರು ಇದ್ದರೆ, ಕೊಡಬೇಕಾದ ರುಸುಂ.

(l) ಸದರೀ ಮಗುವಿನ ಹೆತ್ತವರು ಯಾ ಗಾರ್ಡಿಯನ ಕೋರಿಕೆಯಂತೆ ವ್ಯಾಕ್ಸಿನೇಷ್ಞ ಸರ್ಕಿಲಿನ ಹೊರಗೆ ಹೋಗಿ ಆ ಮಗುವಿಗೆ ಶಿಡುಬು ಹಾಕುವದಕ್ಕೆ ಸರ್ಕಾರ್ ತರಫ್ ವ್ಯಾಕ್ಸಿನೇಟರಿಗೆ ಕೊಡಬೇಕಾದ ರುಸುಂ.

(*m*) ಇದರಡಿ ಕಂಡ ಅಂಶಗಳನ್ನು ತೋರಿಸತಕ್ಕ ರಿಜಿಸ್ಟರ್‌ಗಳ ತಯಾರಿ ವ ಇಡುವಣಿ.

ಈ ರೆಗ್ಯುಲೇಷ್ಟ್ ಜಾರಿಯಲ್ಲಿ ಬಂದ ತಾರೀಖಿನಲ್ಲಿ ಯಾ ಆ ತರುವಾಯ ಅಂತಾ ಸ್ಥಾನೀಯ ಪ್ರಾಂತದಲ್ಲಿ ಹುಟ್ಟಿದಂತಾ ಮಕ್ಕಳ ಹೆಸರುಗಳು, ಈ ರೆಗ್ಯುಲೇಷ್ಟ್ ಜಾರಿಯಲ್ಲಿ ಬರುವದಕ್ಕೆ ಪೂರ್ವ ಅಂತಾ ಸ್ಥಾನೀಯ ಪ್ರಾಂತದಲ್ಲಿ ಹುಟ್ಟಿ; ಮತ್ತು ಈ ರೆಗ್ಯುಲೇಷ್ಟ್ ಜಾರಿಯಲ್ಲಿ ಬರತಕ್ಕ ಕಾಲದಲ್ಲಿ ಹುಡುಗರಾಗಿದ್ದರೆ ಹದಿನಾಲ್ಕು ವರುಷಪಳು, ಗೋಷಾ ಪದ್ಧತಿಯನ್ನನುಸರಿಸತಕ್ಕ ಸಮುದಾಯಕ್ಕೆ ಹುಡಿಗಿಯರಾಗಿದ್ದರೆ ಯೆಂಟು ವರುಷಗಳು, ಅಥವಾ ಇತರ ಸಮುದಾಯಕ್ಕೆ ಸೇರಿದ ಹುಡುಗಿಯರಾಗಿದ್ದರೆ ಹತ್ತು ವರುಷಗಳು ಈ ವಯಸ್ಸುಗಳಿಗೊಳಪಟ್ಟಿರತಕ್ಕ ಕಾಪಾಡಲ್ಪಡದ ಮಕ್ಕಳ ಹೆಸರುಗಳು;

ಈ ರೆಗ್ಯುಲೇಷ್ಟ್ ಜಾರೀಗೆ ಬಂದ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಸ್ಥಾನೀಯ ಪ್ರಾಂತದೊಳಗೆ ತರಲ್ಪಟ್ಟು ಅಲ್ಲಿ ಬಂದು ತಿಂಗಳ ವರಿಗೆ ವಾಸವಾಗಿದ್ದ ಸದರೀ ವಯಸ್ಸುಗಳಿಗೊಳಪಟ್ಟ ಮತ್ತು ಕಾಪಾಡಲ್ಪಡದ ಹುಡುಗರ ವ ಹುಡಿಗಿಯರ ಹೆಸರುಗಳು; ಪ್ರತಿಯಾವರ್ತಿ ಶಿಡುಬು ಹಾಕಿದ್ದರ ಫಲಿತಾಂಶವು, ಅಥವಾ ಅದು ನಿಲ್ಲಿಸಿಲ್ಪಟ್ಟದ್ದು, ಮತ್ತು ಸರ್ಟಿಫಿಕೇಟ್‌ಗಳು ಕೊಡಲ್ಪಟ್ಟದ್ದು, (ಯೇನಾದರಿದ್ದರೆ);

(*n*) ರಿಜಿಸ್ಟರ್‌ಗಳನ್ನು ತಯಾರ್ಮಾಡುವದರಲ್ಲಿಯೂ ಇತರ ವಿಷಯಗಳಲ್ಲಿಯೂ, ಮ್ಯೂನಿಸಿಪಿಲ್ ಕಮ್ಮಿಷನರ್‌ಗಳು ಮ್ಯೂನಿಸಿಪಿಲ್ ವ ಇತರ ಸರ್ಕಾರ್ ಉದ್ಯೋಗಸ್ಥರೂ ಕೊಡಬೇಕಾದ ಕುಮ್ಮಕ್; ಮತ್ತು

(*o*) ವ್ಯಾಕ್ಸಿನೇಷ್ಟ್ ರಿಪೋರ್ಟುಗಳ ಮತ್ತು ರಿಟರ್ನ್‌ಗಳುಯಾನೆ ಲೆಕ್ಕಗಳ ತಯಾರಿ:—

23. ಇದರಡಿ ನಮೂದಿಸುವ ತಕ್ಕೀರ್‌ಗಳ ಪೈಕಿ ಯಾವದನ್ನು ಯಾರು ಮಾಡಿದಾಗ್ಯೂ (ಅಂದರೆ)

ತಕ್ಸೀರ್‌ಗಳ ದಂಡನೆ.

(*a*) ಆರನೇ ಸೆಕ್ಷನಿನ ನಿಯಮುಗಳನ್ನುಲ್ಲಂಘಿಸಿದರೆ;

(*b*) ಅಶ್ರದ್ಧೆಯಾಗಿ ಶಿಡುಬು ಹಾಕಿದರೆ ಅಥವಾ ಅಪರಿ ಶುದ್ಧವಾಗಿಧೆಯೆಂದು ತನಗೆ ನಂಬಲಿಕ್ಕೆ ಕಾರಣವುಂಟಾದಂತಾ ಹಾಲನ್ನು ಪಯೋಗಿಸುವದರ ಮೂಲಕ ಬಂದು ಮಗುವಿನ ಆರೋಗ್ಯಕ್ಕೆ ಹಾನಿಯುಂಟುಮಾಡಿದರೆ,

(*c*) 6, 9, 12, 14 ಮತ್ತು ಹದಿನೈದನೇ ಸೆಕ್ಷನ್‌ಗಳ ಪ್ರಕಾರ ಆವಶ್ಯಕವಾಗಿರುವ ಸರ್ಟಿಫಿಕೇಟ್‌ಗಳನ್ನು ಸಾಕಾದ ಕಾರಣವಿಲ್ಲದೆ ಕೊಡುವದಕ್ಕೆ ನಿರಾಕರಿಸಿದರೆ

(*d*) ಹೆತ್ತವರ ಯಾ ಗಾರ್ಡಿಯನ ಕೋರಿಕೆಯ ಪ್ರಕಾರ ಶಿಡುಬು ಹಾಕತಕ್ಕ ಬಗ್ಗೆ ಅವರ ಸ್ವಂತ ಮನೆಗಳಿಗೆ ಹೋಗುವದಕ್ಕೆ ನ್ಯಾಯವಾದ ಸಬಬಿಲ್ಲದ ನಿರಾಕರಿಸಿದರೆ, ಅಥವಾ ಹತ್ತನೇ ಸೆಕ್ಷನಿನಲ್ಲಿ ಪರ್ಯಾಲೋಚಿತವಾಗಿರುವ ಯಾದಾಸ್ತನ್ನು ಕೊಡದೆ ನಿರಾಕರಿಸಿದರೆ,

(*e*) ಹತ್ತೊಂಭತ್ತನೆಯ ಸೆಕ್ಷನ್ ಪ್ರಕಾರ ಮಾಡಲ್ಪಟ್ಟ ಹುಕುಮಿನೊಳಪಡಲಿಕ್ಕೆ ನ್ಯಾಯವಾದ ಕಾರಣವಿಲ್ಲದೆ ಉಪೇಕ್ಷಿಸಿದರೆ,

(*f*) ಇಪ್ಪತ್ತು ಅಥವಾ ಇಪ್ಪತ್ತೊಂದನೆಯ ಸೆಕ್ಷನ್ ಪ್ರಕಾರ ಮಾಡಲ್ಪಟ್ಟ ರೂಲ್‌ಗಳ ಪೈಕಿ ಯಾವದನ್ನಾದರುಲ್ಲಂಘಿಸಿದರೆ ಅಥವಾ,

(*g*) ಅದೇ ಮಗುವಿನ ವಿಷಯದಲ್ಲಿ ಮಾಡಲ್ಪಟ್ಟ ಬದಸ್ತೂರ್ ಹುಕುಮಿಗೊಳಪಟ್ಟು ನಡೆದುಕೊಳ್ಳಲಿಕ್ಕೆ ಉಪೇಕ್ಷಿಸಿದ ಬಗ್ಗೆ ಪೂರ್ವದೊಳೊಂದಾವರ್ತಿ ದಂಡಿಸಲ್ಪಟ್ಟಿದ್ದ ತರುವಾಯ ಹತ್ತೊಂಭತ್ತನೆಯ ಸೆಕ್ಷನ್ ಪ್ರಕಾರ ಮಾಡಲ್ಪಟ್ಟ ಹುಕುಮಿನಂತೆ ನಡೆದುಕೊಳ್ಳಲಿಕ್ಕೆ ನ್ಯಾಯವಾದ ಕಾರಣವಿಲ್ಲದೆ ಉಪೇಕ್ಷಿಸಿದರೆ

ಇದರಡಿ ಕಂಡಂತೆ ದಂಡಿಸಲ್ಪಡತಕ್ಕದ್ದು. (ಹ್ಯಾಗಂದರೆ):—

(*a*) ಕಲಂನಲ್ಲಿ ನಮೂದಾದ ತಕ್ಕೀರಿನ ವಿಷಯದಲ್ಲಿ ಇನ್ನೂರು ರೂಪಾಯಿಗಳ ತನಕ ವ್ಯಾಪಿಸಬಹುದಾ

(b) ಮತ್ತು c ಕಲಂಗಳಲ್ಲಿ ನಮೂದಾಗಿರುವ ತಕ್ಕೀರ್‌ಗಳ ವಿಷಯದಲ್ಲಿ ಐವತ್ತು ರೂಪಾಯಿಗಳಿಗೆ ವ್ಯಾಪಿಸಬಹುದಾದ ಜುರ್ಮಾನೆಯ ಮೂಲಕ ;

(d) ಕಲಂನಲ್ಲಿ ನಮೂದಾಗಿರುವ ತಕ್ಕೀರ್‌ಗಳ ವಿಷಯದಲ್ಲಿ ಐನೂರು ರೂಪಾಯಿಗಳ ತನಕ ವ್ಯಾಪಿಸ ಬಹುದಾದ ಜುರ್ಮಾನೆಯ ಮೂಲಕ ;

(e) ಮತ್ತು (f) ಕಲಂಗಳಲ್ಲಿ ನಮೂದಾಗಿರುವ ತಕ್ಕೀರ್‌ಗಳ ವಿಷಯದಲ್ಲಿ ಇಪ್ಪತ್ತು ರೂಪಾಯಿಗಳ ತನಕ ವ್ಯಾಪಿಸಬಹುದಾದ ಜುರ್ಮಾನೆಯ ಮೂಲಕ ; ಮತ್ತು

(g) ಕಲಂನಲ್ಲಿ ನಮೂದಾಗಿರುವ ತಕ್ಕೀರಿನ ವಿಷಯದಲ್ಲಿ ಐನೂರು ರೂಪಾಯಿಗಳ ತನಕ ವ್ಯಾಪಿಸಬಹುದಾದ ಜುರ್ಮಾನೆಯ ಮೂಲಕ.

ಜುರ್ಮಾನೇ ಮೊಬಲಗನ್ನು ಬರಮಾಡಿಕೊಂಡು ಖರ್ಚನ್ನು ವಹಿಸಲಿಕ್ಕೆ ಮ್ಯೂನಿಸಿಪೆಲ್ ಫಂಡಿಗಳು ಗುರಿಯಾಗಿರತಕ್ಕದ್ದು.

24. ಗವರ್ನಮೆಂಟಿನವರಿಂದ ಅನ್ಯಥಾ ಹುಕುಂ ಮಾಡಲ್ಪಟ್ಟ ಹೊರತು ಹುಟ್ಟುವಳಿಯಾಗತಕ್ಕ ದಶೋ ಬಸ್ತು ರುಸುಂಗಳು, ಜುರ್ಮಾನೇ ಮೊಬಲಗುಗಳು, ಈ ರೆಗ್ಯುಲೇಷ್ಯನ್ ಅನುಸರಿಸಿ ತಗಲುವ ವಿಶಿಷ್ಟ ಖರ್ಚು ಮೊಬಲಗು ಮ್ಯೂನಿಸಿಪಾಲಿಟಿಯಾಗಿದ್ದರೆ ಮ್ಯೂನಿಸಿಪೆಲ್ ಫಂಡಿಗೂ, ಮ್ಯೂನಿಸಿಪಾಲಿಟಿಯಲ್ಲದೆ ಯಾವದಾದರು ಇತರ ಸ್ಥಾನೀಯ ಪ್ರಾಂತವಾಗಿದ್ದರೆ ಡಿಸ್ಟ್ರಿಕ್ಟ್ ಲೋಕಲ್ ಫಂಡಿಗೂ ಕ್ರಮವಾಗಿ ಜಮಾ ದಾಖಲಾಗಿ ಖರ್ಚು ಬೀಳತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ದಿವಾ.